ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರಃ 529/2017

ಚಾಸಾಃ 14 ಪ್ರಾಸಾಃ8

ದಿನಾಂಕಃ 11.02.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಆಚಾರ್ಯ ರಾಜ ಗಣಪತಿ |
| ತಂದೆಯ ಹೆಸರು | : | ಲೇಟ್ ಗಣಪತಿ ಆಚಾರ್ಯ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ನಿವೃತ್ತ ಎ ಎಸ್ ಐ |
| ವಾಸ ಸ್ಥಳ | : | ಮೂಡಬಿದ್ರೆ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ನಾನು 2015ರಿಂದ 2020ರವರೆಗೆ ಕುಂದಾಪುರದ ಸಂಚಾರಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 15.11.2016 ರಂದು ನಾನು ತ್ರಾಸಿ ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ ರಾತ್ರಿ 11.15 ಗಂಟೆ ಕುಂದಾಪುರ ಸರ್ಜನ್ ಆಸ್ಪತ್ರೆಯಿಂದ ಪ್ರಕರಣದ ಗಾಯಾಳು ಗುರುರಾಜ ಬಾಯರಿ ಎಂಬುವವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುವ ಬಗ್ಗೆ ಮಾಹಿತಿ ಬಂದ ಚೀಟಿಯನ್ನು ಸ್ವೀಕರಿಸಿದ್ದು, ಪ್ರಕರಣದ ಪಿರ್ಯಾದಿದಾರರಾದ ಚಾಸಾ.1ರವರು ಠಾಣೆಗೆ ಬಂದು ಹಾಜರಾಗಿ ಈ ಬಗ್ಗೆ ನೀಡಿದ ಲಿಖಿತ ಮಾಹಿತಿಯನ್ನು

ಸ್ವೀಕರಿಸಿದ್ದು, ಪ್ರಕರಣವನ್ನು ಕಲಂ.279, 337 ರಿಂದ ಕಲಂ.279, 304(ಎ) ಗೆ ಪರಿವರ್ತಿಸುವಂತೆ ಕೋರಿ ವರದಿಯುನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.16 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿಯು ಸೂಚನಾ ಪತ್ರ, ಚಾಸಾ.1ರವರ ಮಾಹಿತಿ ಪತ್ರ ಹಾಗೂ ನಿವೇದನೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.15 ರಿಂದ 17 ಎಂದು, ಸಾಕ್ಷಿ ಸಹಿಗಳನ್ನು ನಿಪಿ.15(ಎ) ರಿಂದ 17(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಆಸ್ಪತ್ರೆಯಿಂದ ಬಂದ ಸೂಚನಾ ಪತ್ರವನ್ನು ಹಾಜರುಪಡಿಸಿರುತ್ತೇನೆ. ಚಾಸಾ.1ರವರು ನೀಡಿದ ಲಿಖಿತ ಮಾಹಿತಿಯ ಬಗ್ಗೆ ನಾನು ವಿಚಾರಣೆ ನಡೆಸಿಲ್ಲ. ನಾನು ಆ ನಂತರ ಪ್ರಕರಣದ ಕಡತವನ್ನು ಚಾಸಾ.16ರವರಿಗೆ ವಹಿಸಿಕೊಟ್ಟಿರುತ್ತೇನೆ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**